ದಿನಾಂಕ:29/6/2019 ರಂದು ಶನಿವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ನಾಗಮಂಗಲ ವಿಭಾಗ ಕಛೇರಿಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು..

**ಹಾಜರಿದ್ದ ಅಧಿಕಾರಿಗಳು / ನೌಕರರು.**

ಶ್ರೀ/ಶ್ರೀಮತಿ/ಕುಮಾರಿ:

1) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
2) ಮರಿಸ್ವಾಮಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
3) ಜಿ. ರಾಮಚಂದ್ರ : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ
4) ರೇಖಾ ಎಸ್.ಆರ್ : ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
5) ಎನ್.ಜಿ.ಹರೀಶ್ : ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
6) ಬೀರಪ್ಪ : ಕಿರಿಯ ಇಂಜಿನಿಯರ್(ವಿ), ದೇವಲಾಪುರ ಶಾಖೆ
7) ಲಕ್ಷ್ಮಿ : ಕಿರಿಯ ಇಂಜಿನಿಯರ್(ವಿ), ಚೀಣ್ಯ ಶಾಖೆ
8) ನಟರಾಜು ಡಿ.ಎನ್ : ಕಿರಿಯ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ನಾಗಮಂಗಲ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ ನಾಗಮಂಗಲ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ/ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ/ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಗಳಲ್ಲಿ ಚರ್ಚಿಸಲಾದ/ನೀಡಲಾದ ದೂರು ಅಥವಾ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮದ ಬಗ್ಗೆ ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರೊಂದಿಗೆ ಚರ್ಚಿಸಿ ಪರಿಶೀಲಿಸಿದರು.

Scanned by CamScanner

1) **ರುದ್ರಪ್ಪ, ಕಸುವಿನಹಳ್ಳಿ, ಪಾಲಗ್ರಾಹಾರ ಪಂಚಾಯ್ತಿ ಮೊಬೈಲ್ ನಂ:8050833835**

ದೂರು:-1) ಬೀದಿ ದೀಪಗಳು ಇಲ್ಲದಿರುವ ಬಗ್ಗೆ ಮತ್ತು 7ಮೀ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಕುರಿತು ದೂರು ನೀಡಿರುತ್ತಾರೆ.

ಕ್ರಮ:- 7ಮೀ ಕಂಬಗಳನ್ನು ಬದಲಾಯಿಸಿ 9ಮೀ ಕಂಬಗಳನ್ನು ಮತ್ತು ಲೈನ್ ಸ್ಪೇಸರ್‌ಗಳನ್ನು ಅಳವಡಿಸಲು ಸೂಕ್ತ ಕ್ರಮ ವಹಿಸಲು ಶಾಖಾಧಿಕಾರಿ ನಾಗಮಂಗಲ ರವರಿಗೆ ನಿರ್ದೇಶಿಸಿದರು.

ದೂರು:- 2) ಟಿಸಿ ಕಂಬಗಳನ್ನು ಸ್ಥಳಾಂತರಿಸುವ ಬಗ್ಗೆ.

ಕ್ರಮ:- ಸ್ಥಳ ಪರಿಶೀಲನೆ ಮಾಡಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ವಹಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು.

2) **ಉಲ್ಲಾಸ್, ಹರದನಹಳ್ಳಿ ಮೊಬೈಲ್ ನಂ:-7795008108**

ದೂರು:- ಹರದನಹಳ್ಳಿ ಸ್ಕೂಲ್‌ಗೆ ನಿರಂತರ ಜ್ಯೋತಿ ಒದಗಿಸುವ ಬಗ್ಗೆ (ಎನ್‌ಜೆವೈ).

ಕ್ರಮ:- ಎನ್‌ಜೆವೈ ಕಾಮಗಾರಿ ಈಗಾಗಲೇ ಪ್ರಗತಿಯಲ್ಲಿರುವುದರಿಂದ ದೂರಿನ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮವಹಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.

3) **ದಾಸೇಗೌಡ, ಎತ್ತುಗೋನಹಳ್ಳಿ, ಚೀಣ್ಯ ಶಾಖೆ:-**

ದೂರು:- ದೇವಸ್ಥಾನದ ಮುಂಭಾಗದಲ್ಲಿರುವ ಕಂಬ ಮುರಿದಿರುವ ಬಗ್ಗೆ.

ಕ್ರಮ:- ಮೇಲ್ಕಂಡ ದೂರಿಗೆ ಈಗಾಗಲೇ ಅವಾರ್ಡ್ ನೀಡಿದ್ದು, ಗುತ್ತಿಗೆದಾರರನ್ನು ವಿಚಾರಿಸಿ ಸ್ಥಳದಲ್ಲಿ ಯಾವುದಾದರು ತೊಂದರೆ ಕಂಡುಬಂದರೆ ಕಂಬವನ್ನು ಕಾಂಕ್ರೀಟಿಂಗ್ ಮಾಡಿ ಬೇರೆ ಸ್ಥಳದಲ್ಲಿ ಕಂಬವನ್ನು ಸ್ಥಳಾಂತರಿಸಲು ಸೂಚಿಸಿದರು.

4) **ಇಂಡಿಯನ್ ಪೆಟ್ರೋಲ್ ಬಂಕ್ ಎದುರು ಮೊಬೈಲ್ ನಂ:-9845440887**

ದೂರು:- ಕಂಬ ಮುರಿದಿರುವುದರಿಂದ ಹತ್ತಿರದ ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲದಿರುವ ಬಗ್ಗೆ. (ಪೆಟ್ರೋಲ್ ಬಂಕ್ ಬಳಿ)

ಕ್ರಮ:- ಕಂಬವನ್ನು ಅಳವಡಿಸುವುದು ಅಥವ ಅಲ್ಲಿಯವರೆಗೂ ಹತ್ತಿರದ ಬೇರೆ ವಿದ್ಯುತ್ ಮಾರ್ಗದಿಂದ ಸಂಪರ್ಕ ಕಲ್ಪಿಸಲು ಸೂಚಿಸಿದರು.

5) **ಪರಮೇಶ್, ಮುಳಕಟ್ಟೆ**

ದೂರು:- ಹೇಮಾವತಿನಾಲಾ ಉಪವಿಭಾಗದ (ಎಸ್.ಸಿ.ಪಿ) ಕಾಮಗಾರಿಗಳನ್ನು ಪೂರ್ಣಗೊಳಿಸದೆ ಇರುವ ಬಗ್ಗೆ.

ಕ್ರಮ:- ಸಂಬಂಧಪಟ್ಟ ಗುತ್ತಿಗೆದಾರರಿಗೆ ಇದರ ಬಗ್ಗೆ ಮಾಹಿತಿ ನೀಡಿ ಸೂಕ್ತ ಕ್ರಮವಹಿಸುತ್ತೇವೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ತಿಳಿಸಿದರು.

Scanned by CamScanner

6) <u>ರವಿ, ದೇವಲಾಪುರ, ಗುರುಗಳಮಾದಹಳ್ಳಿ ಮೊಬೈಲ್ ನಂ:-</u>

ದೂರು:-ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸದೆ ಇರುವ ಕುರಿತು.

ಕ್ರಮ:- 100ಕೆವಿಎ ಪರಿವರ್ತಕವು ಉಗ್ರಾಣದಲ್ಲಿ ಇಲ್ಲದಿರುವುದರಿಂದ ಬಂದಕೂಡಲೇ ಪರಿವರ್ತಕವನ್ನು ಬದಲಾಯಿಸುತ್ತೇವೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ತಿಳಿಸಿದರು.

7) <u>ಪ್ರೇಮ್, ಅಂಚೆಭುವನಹಳ್ಳಿ ಮೊಬೈಲ್ ನಂ:-9901602150</u>

ದೂರು:- 1) ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸದೆ ಇರುವ ಕುರಿತು.

ಕ್ರಮ:- 100ಕೆವಿಎ ಪರಿವರ್ತಕವು ಉಗ್ರಾಣದಲ್ಲಿ ಇಲ್ಲದಿರುವುದರಿಂದ ಬಂದಕೂಡಲೇ ಪರಿವರ್ತಕವನ್ನು ಬದಲಾಯಿಸುತ್ತೇವೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ತಿಳಿಸಿದರು.

ದೂರು:- 2) ಅಂಚೆಚಿಟ್ಟನಹಳ್ಳಿಯಲ್ಲಿ ಗಾಳಿಗೆ ಮುರಿದು ಹೋಗಿರುವ ಕಂಬವನ್ನು ಬದಲಾಯಿಸದೆ ಇರುವ ಕುರಿತು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ತುರ್ತಾಗಿ ಕಂಬವನ್ನು ಬದಲಾಯಿಸಲು ಶಾಖಾಧಿಕಾರಿಯವರಿಗೆ ತಿಳಿಸಿದರು.

ದೂರು:- 3) ಅಂಚೆಭುವನಹಳ್ಳಿಯಲ್ಲಿ ವಾಟರ್ ಸಪ್ಲೈ ಪರಿವರ್ತಕದಲ್ಲಿ ವೋಲ್ಟೇಜ್ ಕೋರತೆ ಇರುವುದರ ಬಗ್ಗೆ ದೂರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮವಹಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು.

8) <u>ರವಿಕುಮಾರ್, ಬುರುಡುಗುಂಟೆ , ಚೀಣ್ಯ ಮೊಬೈಲ್ ನಂ:-9483488655</u>

ದೂರು:- ಐಪಿ ಸೆಟ್‌ಗೆ ವೋಲ್ಟೇಜ್ ಕೊರತೆ ಇರುವ ಕುರಿತು.

ಕ್ರಮ:- ಅಕ್ರಮ ಸಕ್ರಮದಲ್ಲಿ ಹಣ ಪಾವತಿಸಿ ಸಕ್ರಮಗೊಳಿಸಿಕೊಂಡು ಸೌಲಭ್ಯ ಪಡೆಯಲು ಸೂಚಿಸಿದರು.

9) <u>ಚನ್ನೇಗೌಡ, ಸಿಂಗ್ರೀಗೌಡನಕೊಪ್ಪಲು, ನಾಗಮಂಗಲ ಮೊಬೈಲ್ ನಂ:-9880518632</u>

ದೂರು:- ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಪರಿವರ್ತಕ ಅಳವಡಿಸಲಾಗಿದ್ದು ಗ್ರಾಮಕ್ಕೆ ಇದುವರೆಗೂ ಸಂಪರ್ಕ ಕಲ್ಪಿಸಿರುವುದಿಲ್ಲದಿರುವ ಬಗ್ಗೆ ದೂರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮವಹಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿರ್(ವಿ) ರವರಿಗೆ ಮತ್ತು ಶಾಖಾಧಿಕಾರಿಯವರಿಗೆ ಸೂಚಿಸಿದರು.

10) <u>ಕೃಷ್ಣೇಗೌಡರು, ಪಿ.ಚಿಟ್ಟನಹಳ್ಳಿ ಮೊಬೈಲ್ ನಂ:-7349793305</u>

ದೂರು:-ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿಸಿದರೂ ಸಹ ಇನ್ನು ಮೂಲಭೂತ ಸೌಕರ್ಯ ಕಲ್ಪಿಸದಿರುವ ಬಗ್ಗೆ.

ಕ್ರಮ:- ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಗುತ್ತಿಗೆದಾರರ ಟೆಂಡರ್ ಅವಧಿ ಮುಗಿದಿದ್ದು ಮುಂದೆ ಬರುವ ಹೊಸ ಟೆಂಡರ್‌ನಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ ಎಂದು ಕಾರ್ಯನಿರ್ವಾಹ ಇಂಜಿನಿಯರ್(ವಿ) ರವರು ತಿಳಿಸಿರುತ್ತಾರೆ.

Scanned by CamScanner

11) **ನರಸಿಂಹೇಗೌಡ ಮೊಬೈಲ್ ನಂ:-**

ದೂರು:-ಎಲ್‌ಟಿ ಮಾರ್ಗವು ಜೋಲು ಬಿದ್ದಿದ್ದು ಮಧ್ಯಂತರ ಕಂಬವನ್ನು ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮವಹಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿರ್(ವಿ) ರವರಿಗೆ ಮತ್ತು ಶಾಖಾಧಿಕಾರಿಯವರಿಗೆ ಸೂಚಿಸಿದರು.

12) **ಚೀಣ್ಯ ಶಾಖೆ ಮೊಬೈಲ್ ನಂ:-**

ದೂರು:- ಐಪಿ ಸೆಟ್‌ಗೆ ವೋಲ್ಟೇಜ್ ಕೊರತೆ ಇರುವ ಕುರಿತು.

ಕ್ರಮ:- ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿ ಸಕ್ರಮಗೊಳಿಸಿಕೊಂಡು ಹೊಸಪರಿವರ್ತಕ ಅಳವಡಿಸಿ ವೋಲ್ಟೇಜ್ ಉತ್ತಮ ಪಡಿಸಿಕೊಳ್ಳಲು ಸೂಚಿಸಿದರು.

13) **ಶೇಖರ್ ವಕೀಲರು (ಅರ್ಜಿ) ನಾಗಮಂಗಲ:-**

ದೂರು:- ವಿದ್ಯುತ್ ಸಂಪರ್ಕ ಪದೇ ಪದೇ ಇಂಟರ್‌ಪ್ಷನ್ ಆಗುತ್ತಿರುವ ಬಗ್ಗೆ.

ಕ್ರಮ:- ನಾಗಮಂಗಲ ಟೌನ್‌ನಲ್ಲಿ ಐಪಿಡಿಎಸ್, ಡಿಡಿಯುಜಿಜೆವೈ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಇಂಟರ್‌ಪ್ಷನ್ ಆಗುತ್ತಿದೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ಉತ್ತರಿಸಿ. ಒಂದು ತಿಂಗಳೊಳಗಾಗಿ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತೇವೆ ಎಂದು ತಿಳಿಸಿದರು.

14) **ನಾಗೇಶ್, ಗುತ್ತಿಗೆದಾರರು ತೊಳಲಿ :-**

ದೂರು:- ಮಧ್ಯವರ್ತಿ ಕಂಬಗಳಿಗೆ ಕಾರ್ಯದೇಶ ನೀಡದಿರುವ ಬಗ್ಗೆ (13 ಕಂಬ).

ಕ್ರಮ:- ಬಜೆಟ್ ಇಲ್ಲದ ಕಾರಣ ಬಜೆಟ್ ಬಂದಮೇಲೆ ಕಾರ್ಯದೇಶ ಸಂಖ್ಯೆ ನೀಡುತ್ತೇವೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

15) **ಬೊಮ್ಮರಾಜು, ಬಚ್ಚಿಕೊಪ್ಪಲು :-**

ದೂರು:-1) ಎ.ಶಾನಭೋಗನಹಳ್ಳಿ, ಕುಪ್ಪಳ್ಳಿಯಲ್ಲಿ ಮಧ್ಯಂತರ ಕಂಬಗಳಿಗೆ ಕಾರ್ಯದೇಶ ನೀಡದಿರುವ ಬಗ್ಗೆ.

ಕ್ರಮ:- ಬಜೆಟ್ ಇಲ್ಲದ ಕಾರಣ ಬಜೆಟ್ ಬಂದಮೇಲೆ ಕಾರ್ಯದೇಶ ಸಂಖ್ಯೆ ನೀಡುತ್ತೇವೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

ದೂರು:-2) ಸೀತಾಪುರ ಗ್ರಾಮಕ್ಕೆ ನಿರಂತರ ಜ್ಯೋತಿ ಸಂಪರ್ಕ ಕಲ್ಪಿಸದೇ ಇರುವ ಬಗ್ಗೆ (ಅರ್ಜಿ)

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮವಹಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿರ್(ವಿ) ರವರಿಗೆ ಮತ್ತು ಶಾಖಾಧಿಕಾರಿಯವರಿಗೆ ಸೂಚಿಸಿದರು.

Scanned by CamScanner

16) <u>ತಮ್ಮಣ್ಣ ಗೌಡ, ಟಿಬಿ ಬಡಾವಣೆ :-</u>

ದೂರು:- ಬಿಂಡೇನಹಳ್ಳಿ ಕೋಳಿ ಫಾರಂಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಾರ್ಯದೇಶ ಸಂಖ್ಯೆ ನೀಡದಿರುವ ಬಗ್ಗೆ ದೂರು.

ಕ್ರಮ:- ಬಿಂಡೇನಹಳ್ಳಿ ಕೋಳಿ ಫಾರಂಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ತಹಶೀಲ್ದಾರ್ ರವರಿಂದ ಜನರಲ್ ಲೈಸೆನ್ಸ್ ತರಲು ಸೂಚಿಸಿದರು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ :- 16

ಒಟ್ಟು ದೂರು/ಸಮಸ್ಯೆಗಳು :- 20

ಒಟ್ಟು ಹಾಜರಿದ್ದ ಗ್ರಾಹಕರ ಸಂಖ್ಯೆ:-30

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಹಿರಿಯ ಸಹಾಯಕರು ನಾಗಮಂಗಲ ಉಪವಿಭಾಗರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಮೆಮೊ ಸಂಖ್ಯೆ:ಕಾನಿಇಂ(ವಿ)/ಸಕಾಇಂ(ತಾ)/ಸಇಂ(ತಾ)/ನಾ/19-20/ 678-86 ದಿನಾಂಕ: 23-07-19.

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.

<u>ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.

<u>ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.</u>

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ ನಾಗಮಂಗಲ.
4. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ನಾಗಮಮಗಲ/ದೇವಲಾಪುರ/ಚೀಣ್ಯ.
5. ಕಿಆಸ/ಮು.ಕ.

Scanned by CamScanner